ಅಧ್ಯಕ್ಷರು : ದಯಮಾಡಿ ಕೇಳಿ. ಒಂದೊಂದು ಸಲ ಹಾಗೆ ಆಗುತ್ತದೆ. ಉತ್ತರ ತರಿಸಿ ಕೊಂಡು ಹೇಳುತ್ತಾರೆ. ಅದಕ್ಕೆ ವ್ಯವಸ್ಥೆ ಮಾಡುತ್ತೇನೆ. ಈಗ ಮೊದನೆಯದಾಗಿ ಮಾನ್ಯ ಪುಟ್ಟಣ್ಣಯ್ಯನವರು. ಒಂದು ನಿಮಿಷಕ್ಕಿಂತ ಹೆಚ್ಚು ಯಾರೂ ತೆಗೆದುಕೊಳ್ಳುವ ಹಾಗೆ ಇಲ್ಲ. ಒಂದು ನಿಮಿಷದಲ್ಲಿ ಪ್ರಸ್ತಾಪ ಮಾಡಬೇಕು, ದಯಮಾಡಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ನಾನು ಎರಡು ಮೂರು ವಿಚಾರದಲ್ಲಿ ಕೊಟ್ಟಿದ್ದೆ.

ಅಧ್ಯಕ್ಷರು : ಈಗ ಒಂದು ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ, ಆಮೇಲೆ ಮಿಕ್ಕ ವಿಚಾರ ನೋಡೋಣ . ಏಕೆಂದರೆ 17 ವಿಚಾರಗಳು ಇವೆ.

ಅ) ಕರ್ನಾಟಕ ಗೃಹ ಮಂಡಳಿಯ ನೌಕರರಾದ ಅಂದಾನಿಗೌಡರಿಗೆ ಸೈಟು ನೀಡುವ ಬಗ್ಗೆ

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ಗೃಹ ಮಂಡಲಿಯಲ್ಲಿ ಅಂದಾನಿ ಗೌಡ ಎಂದು ಹೇಳಿ ದ್ವಿತೀಯ ದರ್ಜೆ ಸಹಾಯಕ ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದ. ಪಾಪ ಆತ ಸೈಟು ಕೊಡಬೇಕೆಂದು ಹೇಳಿ ತನ್ನ ಅರ್ಜಿಯನ್ನು ಗೃಹ ಮಂಡಲಿಯಲ್ಲಿ ಸಲ್ಲಿಸಿದ್ದರೆ, ಆತನಿಗೆ ಸೈಟ್ ಕೊಡದೇ ನಿಯಮಾವಳಿ ಪ್ರಕಾರ 24 ಸೈಟನ್ನು ಹರಾಜು ಮಾಡಬಾರದು ಎಂದು ಕಾನೂನು ಇದ್ದರೂ ಆತ ಹರಾಜು ಹಾಕುತ್ತಿದ್ದಂತಹ ಸಮಯದಲ್ಲಿ ಗೃಹ ಮಂಡಲಿಯವರು ಕೋರ್ಟಿಗೆ ಹೋಗಿದ್ದಾರೆ. ಕೋರ್ಟ್‌ನಲ್ಲಿ ಸ್ಟೇ ತಂದಿದ್ದಕ್ಕೆ ಆತನನ್ನು ಸಸ್ಪೆಂಡ್ ಮಾಡಿ ಆತನ ಮೇಲೆ ಕ್ರಮ ತೆಗೆದು ಕೊಂಡಿದ್ದಾರೆ. ಈಗ ನಿಯಮಾವಳಿ ಪ್ರಕಾರ ಗೃಹ ಮಂಡಳಿಯಲ್ಲಿ ಎಲ್ಲಾ ಜನರಿಗೆ ಕೊಟ್ಟು ಆತನಿಗೆ ಕೊಟ್ಟಿಲ್ಲ. ತಕ್ಷಣದಲ್ಲಿ ಕಾನೂನಿನ ಪ್ರಕಾರ ಎಲ್ಲರಿಗೂ ಕೊಟ್ಟು ಆತನಿಗೆ, ಅಂದಾನಿ ಗೌಡನಿಗೆ ಕೊಡದೇ ಇರುವುದರಿಂದ ನ್ಯಾಯ ಬದ್ಧವಾಗಿ ಸೈಟ್ ಕೊಡಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಿರತಕ್ಕ ವ್ಯಕ್ತಿ ಮೇಲೆ ಅಧಿಕಾರಿಗಳು, ಅವನ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕ ಕೆಲಸವನ್ನು ಕೈಬಿಟ್ಟು ನ್ಯಾಯವಾಗಿ ಅವನಿಗೆ ಸೈಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ (ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಕಾನೂನಿನ ಅಡಿಯಲ್ಲಿ ಅವನಿಗೆ ನಿವೇಶನ ಸಿಗಲಿಕ್ಕೆ ಇರತಕ್ಕ ಅರ್ಹತೆ ಇದ್ದರೆ, ನಿಯಮಗಳ ಅಡಿಯಲ್ಲಿ ಅದಕ್ಕೆ ಕ್ರಮವನ್ನು ಕೈಗೊಳ್ಳುತ್ತೇನೆ.

ಆ) ಆಟಾ, ಮೈದಾ ಸೋಜಿ ಮೇಲೆ ಮಾರಾಟ ತೆರಿಗೆ ವಿಧಿಸಿರುವುದು.

ಶ್ರೀ ವಸಂತ ವಿ ಸಾಲಿಯಾನ (ಕಾ.ಪು) : ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ 58 ರೋಲರ್ಸ್ ಫ್ಲೋರ್ ಮಿಲ್ ಇದೆ. ಅದರ ಮಂತ್ಲಿ ಪ್ರೊಡಕ್ಷನ್ ಕೆಪ್ಯಾಸಿಟಿ ಒಂದು ಲಕ್ಷ ಟನ್ ಇದೆ. ಇತ್ತೀಚಿನ ಬಜೆಟ್‌ನಲ್ಲಿ ಅದರಲ್ಲಿ ತಯಾರಾದಂತಹ ಆಟಾ, ಮೈದಾ, ಸೋಜಿ ಏನು ಇದೆ. ಇದು ಜನ ಸಾಮಾನ್ಯರು ಉಪಯೋಗ ಮಾಡುವಂತಹ ವಸ್ತು. ಇದರ ಮೇಲೂ ಸಹ ಸೇಲ್ ಟ್ಯಾಕ್ಸ್ 2 ಪರ್ಸೆಂಟ್ 19 ರೂಪಾಯಿಗಳು. ಟಿ ಒಟಿ ಟ್ಯಾಕ್ಸ್ 3 ಪರ್ಸೆಂಟ್ 27 ರೂಪಾಯಿ, ಅದೇ ರೀತಿಯಲ್ಲಿ ಬೇರೆ ಬೇರೆ ರೀತಿಯಲ್ಲಿ ಒಂದು ಕ್ವಿಂಟಲ್‌ಗೆ 56 ರೂಪಾಯಿಗಳಂತಹ ಟ್ಯಾಕ್ಸ್‌ನ್ನು ಹಾಕಿದ್ದಾರೆ. ಈ ವಸ್ತುಗಳು ಜನ ಸಾಮಾನ್ಯರು ಪ್ರತಿನಿತ್ಯ ಉಪಯೋಗಿಸುವಂತಹ ವಸ್ತುಗಳು.